ಹಿರಿಯ ನಾಗರಿಕರ ಬಗ್ಗೆ ಸಮಾಜದಲ್ಲಿ ಕಾಳಜಿ ಕಡಿಮೆಯಾಗುತ್ತಿದೆಯೆ? ಈ ಪ್ರಶ್ನೆ ಎಲ್ಲ ಕಾಲಕ್ಕೂ ಇರುವುದಾದರೂ, ಇತ್ತೀಚಿನ ದಿನಗಳಲ್ಲಿ ಹಿರಿಯ ನಾಗರಿಕರ ತವಕತಲ್ಲಣಗಳ ಕುರಿತ ಚರ್ಚೆಗೆ ಹೆಚ್ಚಿನ ಅವಕಾಶ ಕಲ್ಪಿಸುವ ಘಟನೆಗಳಂತೂ ನಮ್ಮ ಸುತ್ತಮುತ್ತ ನಡೆಯುತ್ತಿವೆ.

ಕೊರೊನಾ ಸೋಂಕು ನಿಯಂತ್ರಿಸಲು ಕಳೆದ ವರ್ಷ ಲಾಕ್‌ಡೌನ್ ಹೇರಿದಾಗ, ‘ಮನೆಯ ಹಿರಿಯರನ್ನು ಜೋಪಾನ ಮಾಡಿಕೊಳ್ಳಿ’ ಎಂಬ ಕಿವಿ ಮಾತೇ ಎಲ್ಲೆಡೆ ಕೇಳಿಬರುತ್ತಿತ್ತು. ಹಂತ ಹಂತವಾಗಿ ಅನ್‌ಲಾಕ್ ಘೋಷಣೆಯಾದರೂ, ವೃದ್ಧರು ಮತ್ತು ಹಿರಿಯರು ಎಚ್ಚರವಾಗಿರಬೇಕು ಎಂಬ ಜಾಗೃತಿಯೊಂದು ಎಲ್ಲ ಕಡೆಯೂ ಇತ್ತು. ಈ ಎಚ್ಚರಿಕೆ, ಜೋಪಾನ ಮಾಡುವ ಪ್ರಕ್ರಿಯೆ ಹಿರಿಯ ನಾಗರಿಕರ ಮನಸ್ಸಿನ ಮೇಲೆ ಪರಿಣಾಮ ಬೀರಿಲ್ಲವೇ?

ಖಂಡಿತಾ ಬೀರಿದೆ. ಅವರ ಮನಸ್ಸಿನಲ್ಲಿದ್ದ ಆತಂಕ ತೀವ್ರತೆ ಪಡೆದುಕೊಂಡದ್ದು ಕೊರೊನಾ ಸೋಂಕಿನ ಎರಡನೇ ಅಲೆಯು ವ್ಯಾಪಿಸಿದ ಸಂದರ್ಭದಲ್ಲಿ.

ಹಿರಿಯ ನಾಗರಿಕರಿರಲಿ, ಈಗಿನ ತಲೆಮಾರೇ ಆಗಿರಲಿ, ತಮಗೆ ಏನಾದರೂ ತೊಂದರೆ ಆಗಬಹುದು ಎಂಬ ಆತಂಕಕ್ಕಿಂತಲೂ ಹೆಚ್ಚಿನ ಭಯವಾಗುವುದು, ತಮ್ಮ ಮಕ್ಕಳಿಗೆ ಅಥವಾ ತಾವು ನಂಬಿದವರಿಗೆ ತೊಂದರೆಯಾಗುತ್ತದೆ ಎಂಬ ಅಳುಕು ಮನದಲ್ಲಿ ಕಾಡಿದಾಗ. ಎರಡನೇ ಅಲೆಯು ವ್ಯಾಪಿಸಿದಾಗ ಕೊರೊನಾ ಸೋಂಕು ಮಧ್ಯ ವಯಸ್ಸಿನವರನ್ನು ಹೆಚ್ಚಾಗಿ ಕಾಡುತ್ತಿರುವ ಸುದ್ದಿ ಎಲ್ಲೆಂದರಲ್ಲಿ ಕೇಳಿಬರತೊಡಗಿತು. ಈ ಸುದ್ದಿ ಕಿವಿಗೆ ಬಿದ್ದದ್ದೇ, ಹಿರಿಯರಲ್ಲಿ ಆಗಲೇ ಇಣುಕಿದ್ದ ಭಯವು ಮತ್ತಷ್ಟು ಹೆಚ್ಚತೊಡಗಿತು. ಎರಡನೇ ಅಲೆಯಲ್ಲಿ ವ್ಯಾಪಿಸಿದ ಸೋಂಕು ಎಷ್ಟೋ ಮನೆಗಳಲ್ಲಿ ದುಡಿಯುವ ಜೀವಗಳನ್ನು ಬಲಿ ತೆಗೆದುಕೊಂಡಿತು. ಇಂಥ ಸುದ್ದಿಗಳನ್ನು ಕೇಳುವಾಗ ಎಷ್ಟೇ ಗಟ್ಟಿ ಮನಸ್ಸಿನ ವ್ಯಕ್ತಿಯಾದರೂ ಆತಂಕಪಡುವುದು ಸಹಜವೇ. ಅದರಲ್ಲೂ ಹಿರಿಯರ ನಾಗರಿಕರ ಮನಸ್ಥಿತಿ ಮತ್ತಷ್ಟು ದುರ್ಬಲವಾಗಿಬಿಡುತ್ತದೆ.

ಸೋಂಕಿನ ಭಯ ಒಂದೆಡೆಯಾದರೆ, ಸಂಬಂಧಗಳಲ್ಲಿರುವ ಭಾವನೆಗಳನ್ನು ಬಲವಂತವಾಗಿ ನಿರ್ಲಿಪ್ತಗೊಳಿಸಬೇಕಾದ ಅನಿವಾರ್ಯತೆ ಮತ್ತೊಂದು ರೀತಿಯ ಭಯ ಸೃಷ್ಟಿಸಿದೆ. ತಮ್ಮದೇ ಸ್ನೇಹಿತರು ಸೋಂಕಿನಿಂದ ಸಾವನ್ನಪ್ಪಿದಾಗ, ಆ ಸಾವನ್ನು ಅವರ ಮಕ್ಕಳು ಎದುರಿಸಿದ ವಿಧಾನಗಳು, ಹಿರಿಯರ ಪಾಲಿಗೆ ಭಯಾನಕವೇ. ವೃತ್ತಿಜೀವನದಲ್ಲಿ ಹತ್ತಾರು ವರ್ಷ ಜೊತೆಯಾಗಿ ಇದ್ದ ವ್ಯಕ್ತಿ, ದೂರದಲ್ಲೆಲ್ಲೋ ತೀರಿಕೊಂಡನೆಂಬ ಸುದ್ದಿ ಕೇಳಿದ ಬಳಿಕ ಧಾವಿಸಿ ‘ಅಂತಿಮ ದರ್ಶನ’ ಮಾಡುವ ಅವಕಾಶವೂ ಇಲ್ಲವಾಗಿದೆ. ಬೇರೆ ದಾರಿಯಿಲ್ಲದೆ ಮನೆಯೊಳಗೇ ಕುಳಿತು, ಅಗಲಿದ ಬಂಧುಮಿತ್ರರ ಕುರಿತು ಯೋಚಿಸುತ್ತಾ ಕೊರಗುತ್ತಾ ಇರಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ಇತ್ತೀಚೆಗೆ, ಹಿರಿಯ ಸಾಹಿತಿಯೊಬ್ಬರಿಗೆ ಫೋನ್ ಮಾಡಿದಾಗ ಅವರು ಒಂದೆರಡು ಮಾತುಗಳನ್ನಾಡುತ್ತಲೇ ಅಳಲು ಆರಂಭಿಸಿಬಿಟ್ಟರು. ಆರ್ಥಿಕವಾಗಿ ಸುಭದ್ರವಾಗಿರುವ ಕುಟುಂಬ ಅವರದು. ಆದರೆ ಪ್ರತೀ ದಿನ ಒಬ್ಬರಲ್ಲಾ ಒಬ್ಬರು ಸಮಕಾಲೀನರು, ಸ್ನೇಹಿತರು ತೀರಿಕೊಂಡ ಸುದ್ದಿ ಕೇಳಿ ಅವರು ಬಹಳ ನೊಂದಿದ್ದರು. ತೀರಿಕೊಂಡವರ ಮುಖದರ್ಶನ ಮಾಡಿ ಗೌರವ ಸಲ್ಲಿಸುವುದಕ್ಕೂ ಅವಕಾಶವಿಲ್ಲದಂತಹ ಸ್ಥಿತಿ ಉಂಟಾಗಿದೆ ಎಂದು ತಮ್ಮ ಮನಸ್ಸಿನ ದುಗುಡವನ್ನು ಹಂಚಿಕೊಂಡರು. ಅವರ ಮನೆಯಲ್ಲಿ ಮಗನಿಗೂ ಸೋಂಕು ಬಂದಿತ್ತು. ಹೊರಗಿನ ಸಂಕಟದ ಜೊತೆಗೆ ಒಳಗಿನ ಒದ್ದಾಟವೂ ಅವರನ್ನು ಗಾಸಿಗೊಳಿಸಿತ್ತು.

ಇತ್ತೀಚೆಗೆ ಮೈಸೂರಿನಲ್ಲಿ ನಡೆದ ಎರಡು ಘಟನೆಗಳಂತೂ ಮಾನವೀಯ ಸಂಬಂಧಗಳ ಮೌಲ್ಯವನ್ನೇ ಬುಡಮೇಲು ಮಾಡುವಂತಿವೆ. ತಂದೆಯ ಅಂತ್ಯಸಂಸ್ಕಾರ ನಡೆಸಲು ಬಾರದ ಮಗ, ‘ಅಪ್ಪನ ಬಳಿ ಹಣವಿದ್ದರೆ ತಂದುಕೊಡಿ’ ಎಂದು ಕೇಳಿದ ಬಗ್ಗೆ ವಾಹಿನಿಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಹಿಗ್ಗಾಮುಗ್ಗಾ ಚರ್ಚೆಗಳು ನಡೆದವು. ಅದೇ ಮೈಸೂರಿನ ಮಹದೇಶ್ವರ ಬಡಾವಣೆಯಲ್ಲಿ ಮಹಿಳೆಯೊಬ್ಬರು ತೀರಿಕೊಂಡಾಗಲೂ ಆಕೆಯ ಹೆಣ್ಣುಮಕ್ಕಳು ತಾಯಿಯ ಅಂತ್ಯಕ್ರಿಯೆ ನಡೆಸುವ ಆಸಕ್ತಿ ತೋರಿಸಲಿಲ್ಲ. ಇವೆರಡು ಜನರ ಗಮನ ಸೆಳೆದ ಉದಾಹರಣೆಗಳಷ್ಟೇ. ಸುದ್ದಿಯ ವ್ಯಾಪ್ತಿಗೆ ಬಾರದೆ ಇಂತಹ ಎಷ್ಟೋ ಘಟನೆಗಳು ನಡೆದಿರಬಹುದು. ಜೊತೆಗೆ, ಈ ಘಟನೆಗಳಿಗೆ ಹಲವಾರು ಆಯಾಮಗಳೂ ಇರಬಹುದು.

ತಮ್ಮ ತಂದೆ ತಾಯಿ ಅಥವಾ ಹಿರಿಯರೊಡನೆ ಮಕ್ಕಳು ಹೇಗೆ ವರ್ತಿಸುತ್ತಿದ್ದಾರೆ ಎನ್ನುವ ಜಿಜ್ಞಾಸೆ ಮೈಸೂರಿನ ಘಟನೆಗಳ ಹಿನ್ನೆಲೆಯಲ್ಲಿ ಉಂಟಾಗುತ್ತದೆ. ‘ಸಾವಿನ ಸುದ್ದಿ ಕೇಳಿದರೆ ಆಹ್ವಾನ ಇಲ್ಲದೇ ಇದ್ದರೂ ಹೋಗಿ, ಅವರ



ವ್ಯಾಕ್ಸೀನ್ ಪಡೆದ ನಿರಾಳಭಾವ.
ಚಿತ್ರ: ಜನಾರ್ದನ ಬಿ.ಕೆ.